ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಣಸೂರು.

ಸಿ.ಸಿ. ಸಂಖ್ಯೆಃ 620/2014

| | | |
|---|---|---|
| ಹೆಸರುಃ | ಸುಧಾಕರ | ಪಿ.ಡಬ್ಲ್ಯೂ- 01 ಸಿ.ಡಬ್ಲ್ಯೂ- 01 |
| ತಂದೆಃ | ಚಂದ್ರಶೇಖರ | ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾದ ದಿನಾಂಕಃ 26.10.2021 |
| ವಯಸ್ಸುಃ | 49 ವರ್ಷ | |
| ಕೆಲಸಃ | ಮುಖ್ಯ ವ್ಯವಸ್ಥಾಪಕ | |
| ವಾಸಸ್ಥಳಃ | ಅಹಮದಾಬಾದ್ | |

ಮುಖ್ಯ ವಿಚಾರಣೆಃ ಸ.ಸ.ಅ.ರವರಿಂದಃ

ನಾನು ಫೆಬ್ರುವರಿ 2011 ರಿಂದ ಮೇ 2015ರ ಹುಣಸೂರು ಕರ್ನಾಟಕ ಬ್ಯಾಂಕಿನಲ್ಲಿ ಶಾಖ ವ್ಯವಸ್ಥಾಪಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ಆರೋಪಿ ಅದೇ ಬ್ಯಾಂಕಿನಲ್ಲಿ ನನಗಿಂತ ಪೂರ್ವದ ಅವಧಿಯಲ್ಲಿ ಶಾಖಾ ವ್ಯವಸ್ಥಾಪಕನಾಗಿ ಕೆಲಸ ಮಾಡುತ್ತಿದ್ದರು. ನಾನು ಪ್ರಭಾರವನ್ನು ವಹಿಸಿಕೊಂಡ ನಂತರ ನಮ್ಮ ಬ್ಯಾಂಕಿನ ಕೆಲವೊಂದು ಗ್ರಾಹಕರು ಆರೋಪಿ ಕೆಲಸ ಮಾಡುತ್ತಿದ್ದ ಸಮಯದಲ್ಲಿ ತಮ್ಮಗಳ ಖಾತೆಯಲ್ಲಿಯ ಹಣದ ವಂಚನೆ, ಅಧಿಕಾರ ದುರುಪಯೋಗ, ಇತ್ಯಾದಿ ಕುರಿತು ನಮಗೆ ಮೌಖಿಕ ದೂರುಗಳನ್ನು ನೀಡಿದ್ದರು. ಸದರಿ ಸಂಗತಿಯನ್ನು ನಾನು ನಮ್ಮ ಮುಖ್ಯ ಕಛೇರಿಗೆ ತಿಳಿಸಿದೆನು. ಆ ನಂತರ ನಮ್ಮ ಮುಖ್ಯ ಕಛೇರಿಯ ಅಧಿಕಾರಿಗಳು ಬ್ಯಾಂಕಿಗೆ ಬಂದು ತನಿಖೆಯನ್ನು ಮಾಡಿದರು. ಸದರಿಯವರು ತನಿಖೆಯನ್ನು ಮಾಡಿ ವರದಿಯನ್ನು ಮುಖ್ಯ ಕಛೇರಿಗೆ ಕೊಟ್ಟಿದ್ದು, ಸದರಿ ವರದಿಯ ಆಧಾರದಲ್ಲಿ ಮುಖ್ಯ ಕಛೇರಿಯಿಂದ ಪೋಲಿಸರಿಗೆ ದೂರು ಸಲ್ಲಿಸುವಂತೆ ನಿರ್ದೇಶನ ನೀಡಿದ್ದರಿಂದ ನಾನು ದಿಃ 11.07.2012 ರಂದು ಪೋಲಿಸ್ ಠಾಣೆಗೆ ಲಿಖಿತ ದೂರನ್ನು ಸಲ್ಲಿಸಿರುತ್ತೇನೆ. ಸದರಿ ದೂರನ್ನು ನಾನು ನಮ್ಮ ಮುಖ್ಯ ಕಛೇರಿಯ ಅಧಿಕಾರಿಗಳ ತನಿಖಾವರದಿಯ ಆಧಾರದಲ್ಲಿ ಹಾಗೂ ನನಗೆ ಬಂದ ಮಾಹಿತಿಯ ಆಧಾರದಲ್ಲಿ ನೀಡಿರುತ್ತೇನೆ. ಸದರಿ ದೂರಿನಲ್ಲಿ ಹೆಚ್.ಡಿ. ಕೋಟೆ ತಾಲೂಕಿನ ಕ್ಯಾತನಹಳ್ಳಿ ಗ್ರಾಮದ ರಾಜಮ್ಮ ಎನ್ನುವವರ ಖಾತೆಗೆ ಸಂಬಂಧಿಸಿದಂತೆ ಸಂಖ್ಯೆ 764262 ಅನ್ನು ದಿಃ

21.05.2010 ರಂದು ತೆರೆದಿರುತ್ತಾರೆ. ಆನಂತರ ಆಕೆಯು ಎರಡು ವಿಧಧ ಸಾಲ ಸೌಲಭ್ಯಗಳನ್ನು ಬೆಳೆಸಾಲ ಓ.ಡಿ.ಕೆ.ಸಿ 11107, ಖಾತೆಯಲ್ಲಿ ರೂ. 1,50,000/- ಮತ್ತು ಜಮೀನು ಅಭಿವೃದ್ಧಿ ಸಾಲ ಪಿ.ಎಸ್.ಟಿ.ಎಲ್ 11361 ರಲ್ಲಿ ರೂ. 3,00,000/- ವನ್ನು ದಿಃ 14.06.2010 ರಂದು ಪಡೆದಿರುತ್ತಾರೆ. ಈ ಬಗ್ಗೆ ಆಕೆಯು ಬೆಳೆ ಸಾಲದ ಕಡೆಗೆ ರೂ. 16,894/- ಮತ್ತು ಕಂತು ಸಾಲದ ಕಡೆಗೆ ರೂ. 70,163/- ಬಾಕಿದಾರಾಗಿರುತ್ತಾರೆ.

ಶ್ರೀಮತಿ ರಾಜಮ್ಮ ಕೋಂ ಜಗನ್ನಾಥ ರವರು ಕಬ್ಬು ಬೆಳೆಗಾರಾಗಿದ್ದು, ಅವರು ಬೆಳೆದ ಕಬ್ಬನ್ನು ಮೈಸೂರು ಜಿಲ್ಲೆ, ನಂಜನಗೂಡಿನಲ್ಲಿರುವ ಬನ್ನಾರಿಯಮ್ಮನ್ ಶುಗರ್ಸ್ ಲಿ., ಕಾರ್ಖಾನೆಗೆ ಸರಬರಾಜು ಮಾಡಿರುತ್ತಾರೆ. ನಮ್ಮ ಬ್ಯಾಂಕಿನ ವ್ಯವಸ್ಥಾಪಕರಾಗಿದ್ದ ಶ್ರೀ ಬಾಲಸುಬ್ರಮಣ್ಯ ಭಟ್ ಎನ್ ರವರು ದಿಃ 07.07.2010 ರಂದು ಸದರಿ ಕಾರ್ಖಾನೆಯ ಆಡಳಿತ ಮಂಡಳಿಗೆ ಪತ್ರವೊಂದನ್ನು ಬರೆದು, ಶ್ರೀಮತಿ ರಾಜಮ್ಮ ಕೋಂ ಜಗನ್ನಾಥ ರವರು ಕಾರ್ಖಾನೆಗೆ ಸರಬರಾಜು ಮಾಡಿದ ಕಬ್ಬಿನ ಬಾಬ್ತು ಹಣವನ್ನು ನಮ್ಮ ಬ್ಯಾಂಕಿಗೆ ನೇರವಾಗಿ ಕಳುಹಿಸಿಕೊಡುವಂತೆ ಮನವಿ ಮಾಡಿರುತ್ತಾರೆ. ಅದೇ ರೀತಿಯ ಸದರಿ ಕಾರ್ಖಾನೆಯ ಆಡಳಿತ ಮಂಡಳಿಯವರು ನಂಜನಗೂಡಿನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಯಲ್ಲಿ ಸಂದಾಯವಾಗುವಂತೆ ದಿಃ 07.12.2010 ನೇ ತಾರೀಖಿನ ಚೆಕ್ ನಂ. 083539 ವುಳ್ಳ ರೂ. 57,783/- ಗಳ ಚೆಕ್ಕನ್ನು ಶ್ರೀಮತಿ ರಾಜಮ್ಮ ಕೋಂ ಜಗನ್ನಾಥ ರವರು ಉಳಿತಾಯ ಖಾತೆ ಸಂಖ್ಯೆ 764262 ಕ್ಕೆ ಸಂದಾಯವಾಗುವಂತೆ ಸೂಚಿಸಿ ನೀಡಿದ ಚೆಕ್ಕನ್ನು ಶ್ರೀಮತಿ ರಾಜಮ್ಮ ಕೋಂ ಜಗನ್ನಾಥ ರವರು ಶ್ರೀ ಬಾಲಸುಬ್ರಮಣ್ಯ ಭಟ್ ರವರ ಹಸ್ತ ನೀಡಿರುತ್ತಾರೆ. ಶ್ರೀ ಬಾಲಸುಬ್ರಮಣ್ಯ ಭಟ್ ರವರು (ಇನ್ನು ಮುಂದೆ ಎನ್.ಬಿ.ಎಸ್. ಭಟ್ ಎಂದು ನಮೂದಿಸಲಾಗಿದೆ) ಶ್ರೀಮತಿ ರಾಜಮ್ಮ ಕೋಂ ಜಗನ್ನಾಥ ರವರ ಸಹಿಗಳನ್ನು ಅನೇಕ ಕಾಗದ ಪತ್ರಗಳಿಗೆ ಪಡೆದು ಒಂದುವಾರದ ನಂತರ ಬರುವಂತೆ ತಿಳಿಸಿರುತ್ತಾರೆ, ಈ ಬಗ್ಗೆ ಶ್ರೀಮತಿ ರಾಜಮ್ಮ ಕೋಂ ಜಗನ್ನಾಥ ರವರು ಲಿಖಿತ ದೂರೊಂದನ್ನು ಬ್ಯಾಂಕಿಗೆ ನೀಡಿದ್ದು, ಅದರ ಪ್ರಕಾರ ತಾವು ಶ್ರೀ ಎನ್.ಬಿ.ಎಸ್. ಭಟ್ ರವರಿಗೆ ಚೆಕ್ ಹಣವನ್ನು ತಮಗೆ ನೀಡುವಂತೆಯೂ ಮತ್ತು ಸಾಲದ ಖಾತೆಗೆ ಜಮಾ ಮಾಡದಂತೆಯೂ ಕೇಳಿಕೊಂಡಿದ್ದು, ತಮ್ಮನ್ನು ಒಂದು ವಾರ ಬಿಟ್ಟು ಬರುವಂತೆ ತಿಳಿಸಿದ್ದರೆಂದು, ತಾವು ಅನೇಕ ಬಾರಿ ಬಂದು ಭೇಟಿಯಾದರೂ

ಸಹ ಹಣ ಕೊಟ್ಟಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಬಗ್ಗೆ ಆಂತರಿಕ ಶೋಧನೆ ಮಾಡಲಾಗಿ ತಿಳಿದುಬಂದದ್ದೇನೆಂದರೆ, ಶ್ರೀ ಎನ್.ಬಿ.ಎಸ್. ಭಟ್ ರವರು ಸದರೀ ಚೆಕ್ ಮತ್ತು ಚಲನ್ ಅನ್ನು ಬ್ಯಾಂಕಿನ ಮತ್ತೊಬ್ಬ ಗ್ರಾಹಕರಾದ ಶ್ರೀಮತಿ ರಾಜಮ್ಮ ಕೋಂ ಶಿವೇಗೌಡ, ಹೊಗೆಸೊಪ್ಪು ಬೆಳೆಗಾರರು, ದೊಡ್ಡಹೆಜ್ಜೂರೂ ಗ್ರಾಮ, ಹುಣಸೂರು ತಾಲೂಕು ರವರ ಉಳಿತಾಯ ಖಾತೆ ಸಂಖ್ಯೆ 764009 ಗೆ ಜಮಾ ಆಗುವಂತೆ ತುಂಬಿ ನಮ್ಮ ಬ್ಯಾಂಕಿನ ಅಧಿಕಾರಿ ಸದರೀ ಚೆಕ್ ಮತ್ತು ಚಲನ್ ಅನ್ನು ವರ್ಗಾಯಿಸಿ ಸದರೀ ಬ್ಯಾಂಕಿನ ಹಣವು ಶ್ರೀಮತಿ ರಾಜಮ್ಮ ಕೋಂ ಶಿವೇಗೌಡ ರವರ ಖಾತೆಗೆ ವರ್ಗಾವಣೆಯಾಗುವಂತೆ ಮಾಡಿ ನಂತರ ಸದರೀ ಹಣವನ್ನು ತೆಗೆದು ದುರುಪಯೋಗಪಡಿಸಿಕೊಂಡಿರುತ್ತಾರೆ.

ಶ್ರೀಮತಿ ರಾಜಮ್ಮ ಕೋಂ ಶಿವೇಗೌಡರಿಗೂ ಮತ್ತು ಶ್ರೀಮತಿ ರಾಜಮ್ಮ ಕೋಂ ಜಗನ್ನಾಥ ರವರಿಗೂ ಯಾವುದೇ ಸಂಬಂಧ ಇರುವುದಿಲ್ಲ. ಬನ್ನಾರಿಯಮ್ಮನ್ ಶುಗರ್ಸ್ ಲಿ., ನೀಡಿರುವ ಚೆಕ್ಕಿನ ಹಣವು ಶ್ರೀಮತಿ ರಾಜಮ್ಮ ಕೋಂ ಶಿವೇಗೌಡರಿಗೆ ಸೇರಿದ ಹಣವಲ್ಲ. ಶ್ರೀ ಎನ್.ಬಿ.ಎಸ್. ಭಟ್ ರವರು ಅಕ್ರಮವಾಗಿ ಶ್ರೀಮತಿ ರಾಜಮ್ಮ ಕೋಂ ಶಿವೇಗೌಡರ ಖಾತೆಗೆ ತುಂಬಿದ ಹಣವನ್ನು ತಮ್ಮ ಸ್ವ ಹಸ್ತಾಕ್ಷರದಲ್ಲಿ ತುಂಬಿದ ಕಾಗದ ಪತ್ರಗಳ ಮುಖೇನ ರೂ 55,000/- ಗಳನ್ನು ತಮ್ಮ ಕ್ಯಾಬಿನ್ ನಲ್ಲಿ ಹಣಕ್ಕಾಗಿ ಗ್ರಾಹಕರು ಕಾಯುತ್ತಿದ್ದಾರೆ ಎಂದು ಅಂದಿನ ಕ್ಯಾಶಿಯರ್ ಮಿಸ್. ರಮ್ಯ ಎನ್ ಅವರಿಗೆ ತಿಳಿಸಿ ಹಣವನ್ನು ಪಡೆದಿರುತ್ತಾರೆ. ಈ ಬಗ್ಗೆ ಬ್ಯಾಂಕಿನ ಅಧಿಕಾರಿಯಾದ ಶ್ರೀ ಅಮೃತ್ ರವರು ಸಹ ಸದರೀ ದಾಖಲೆಗಳ ಪತ್ರಗಳನ್ನು ನೋಡಿರುತ್ತಾರೆ ಹೀಗೆ ಬ್ಯಾಂಕಿನ ಅಧಿಕಾರಿಗಳನ್ನು ನಂಬಿಸಿ ಬ್ಯಾಂಕಿನ ಗ್ರಾಹಕರಾದ ಶ್ರೀಮತಿ ರಾಜಮ್ಮ ಕೋಂ ಜಗನ್ನಾಥ ರ ಬಳಿ ಒಂದು ಖಾಲಿ ಹಣ ತೆಗೆಯುವ ಸ್ಲಿಪ್ ಗೆ ಸಹಿ ಪಡೆದು ಅದೇ ಹೆಸರಿನ ಬೇರೊಬ್ಬ ವ್ಯಕ್ತಿಗೆ ಹಣ ಪಾವತಿಯಾಗಿರುವುದಾಗಿ ತಿಳಿಸಿ ಇನ್ನಷ್ಟು ದಿನಗಳ ನಂತರ ಸೂಚಿಸಿ ಶುಗರ್ ಫ್ಯಾಕ್ಟರಿಯವರು ನೀಡಿದ ಚೆಕ್ಕಿನ ಹಣದ ಪೈಕಿ ಬಾಕಿಯಾದ ರೂ. 2,250/- ಗಳನ್ನು ಸಹ ತೆಗೆದುಕೊಂಡಿರುತ್ತಾರೆ. ಈ ರೀತಿಯಾಗಿ ಬ್ಯಾಂಕಿನ ಹಣವನ್ನು ಕಾನೂನು ಬಾಹಿರವಾಗಿ ಪಡೆದು ದುರುಪಯೋಗಪಡಿಸಿಕೊಂಡಿರುತ್ತಾರೆ.

ನಮ್ಮ ಬ್ಯಾಂಕಿನ ಮತ್ತೊಬ್ಬ ಗ್ರಾಹಕರಾದ ಹುಣಸೂರಿನ ದೇವರಾಜ್ ಅರಸ್

ನಗರದ ಬಡಾವಣೆಯ ವಾಸಿ ಶ್ರೀ ಹೆಚ್.ಎಸ್.ವರದರಾಜ್ ಬಿನ್ ಶೆಟ್ಟಯ್ಯ ಬ್ಯಾಂಕಿಗೆ ನೀಡಿರುವ ಲಿಖಿತ ದೂರೊಂದರಿಂದ ತಿಳಿದುಬಂದಿದ್ದೇನೆಂದರೆ ಸದರೀ ವಕ್ತಿಯು ನಮ್ಮ ಬ್ಯಾಂಕಿನಲ್ಲಿ ಉಳಿತಾಯ ಖಾತೆ ಸಂಖ್ಯೆಃ 760264 ಹೊಂದಿದ್ದು, ನಮ್ಮ ಬ್ಯಾಂಕಿನಿಂದ ರೂ. 11,25,000/- ವಿವಿಧ ಉದ್ದೇಶಗಳಿಗಾಗಿ ಸಾಲ ಪಡೆದಿದ್ದು, ಸದರೀ ಸಾಲ ಮರುಪಾವತಿಗೆ ಶ್ರೀ ಎನ್.ಬಿ.ಎಸ್. ಭಟ್ ರವರ ಹಸ್ತ ರೂ. 3,00,000/- ವನ್ನು ದಿಃ 03.02.2011 ರಂದು ನೀಡಿದ್ದು, ತಮ್ಮ ಸಾಲದ ಖಾತೆಗಳಿಗೆ ಜಮಾ ಮಾಡಲು ತಿಳಿಸಿರುತ್ತಾರೆ. ಸದರಿಯವರು ಬ್ಯಾಂಕಿಗೆ ದಿಃ 10.03.2012 ರಂದು ನೀಡಿರುವ ದೂರಿನಂತೆ ತಿಳಿದು ಬಂದಿದ್ದೇನೆಂದರೆ, ಶ್ರೀ ಎನ್.ಬಿ.ಎಸ್. ಭಟ್ ರವರು ತಮ್ಮಿಂದ ಪಡೆದ ಹಣದ ಬಾಬ್ತು ರಶೀದಿಯನ್ನು ಪಡೆಯಲು ಮಾರನೇ ದಿನ ಬರುವಂತೆ ತಿಳಿಸಿದ್ದರೆಂದು ಮತ್ತು ತಾವು ಮ್ಯಾನೇಜರ್ ರವರ ಮೇಲಿನ ನಂಬಿಕೆಯಿಂದ ಹಣ ನೀಡಿ ಹೋಗಿದ್ದಾಗಿಯೂ ಆದರೆ ಎನ್.ಬಿ.ಎಸ್.ಭಟ್ ರವರು ವರ್ಗಾವಣೆ ಗೊಂಡಿದ್ದಾರೆ ಎಂದು ತಿಳಿದು ಬಂತು. ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿದಾಗ ತಾವು ನೀಡಿದ ಹಣವನ್ನು ಸಸ್ಪೆನ್ಸ್ ಅಕೌಂಟ್ ನಲ್ಲಿ ಇಟ್ಟಿರುವುದಾಗಿ ಹಾಗೂ ತಾವು ಹುಣಸೂರಿಗೆ ಬಂದಾಗ ಸದರಿ ಹಣವನ್ನು ಸಾಲದ ಖಾತೆಗೆ ಜಮಾ ಮಾಡುವುದಾಗಿ ತಿಳಿಸಿರುತ್ತಾರೆ. ಎನ್.ಬಿ.ಎಸ್.ಭಟ್ ರವರು ಹುಣಸುರಿನ ಶಾಖೆಗೆ ಬಂದಾಗ ಹೆಚ್.ಎಸ್.ವರದರಾಜು ರವರು ಹೋಗಿ ಕೇಳಿದಾಗ ಈಗಿರುವ ವ್ಯವಸ್ಥಾಪಕರು ರಜೆ ಮೇಲೆ ಹೋದ ವೇಳೆಯಲ್ಲಿ ಹಣವನ್ನು ಹೆಚ್.ಎಸ್.ವರದರಾಜು ರವರು ಖಾತೆಗೆ ತುಂಬುವುದಾಗಿ ತಿಳಿಸಿದ್ದರೆಂದು, ಆ ನಂತರ ಹೆಚ್.ಎಸ್. ವರದರಾಜು ರವರು ಪದೇ ಪದೇ ಎನ್.ಬಿ.ಎಸ್.ಭಟ್ ರವರನ್ನು ಸಂಪರ್ಕಿಸಿದಾಗ ಸದರಿಯವರು ದಿಃ 31.05.2011 ರಂದು ರೂ. 2,64,000/- ವನ್ನು ಹೆಚ್.ಎಸ್.ವರದರಾಜು ರವರ ವಿವಿಧ ಖಾತೆಗೆ ಮೈಸೂರಿನಲ್ಲಿರುವ ಕುವೆಂಪುನಗರದ ತಮ್ಮ ಬ್ಯಾಂಕಿನ ಶಾಖೆಯಿಂದ ವರ್ಗಾಯಿಸಿದ್ದು, ಸದರೀ ಕ್ರೆಡಿಟ್ ಓಚರ್ ಗಳು ಶ್ರೀ ಬಾಲಸುಬ್ರಮಣ್ಯ ಭಟ್ ರವರ ಹಸ್ತಾಕ್ಷರದಲ್ಲಿದ್ದು, ಸದರಿಯವರು ಇನ್ನು ರೂ. 36,000/- ಗಳನ್ನು ಹೆಚ್.ಎಸ್.ವರದರಾಜು ರವರಿಗೆ ಬಾಕಿದಾರರಾಗಿದ್ದಾರೆಂದು ತಿಳಿಸಿದ್ದಾರೆ. ಈ ರೀತಿ ಗ್ರಾಹಕರು ನೀಡಿರುವ ಹಣವನ್ನು ಸಾಲದ ಖಾತೆಗೆ ಜಮಾ ಮಾಡದೆ ದುರುಪಯೋಗಪಡಿಸಿಕೊಂಡಿರುತ್ತಾರೆ.

ಶ್ರೀ ಎನ್ ಬಿ ಎಸ್ ಭಟ್ ರವರು ತಮ್ಮ ಅಧಿಕಾರಾವಧಿಯಲ್ಲಿ ಕೆ.ವೈ.ಸಿ ನಿಯಮಗಳನ್ನು ಪಾಲಿಸದೇ ಹುಣಸೂರಿನ ಬಿ.ಎಂ.ಬೈಪಾಸ್ ರೋಡಲ್ಲಿ ಕೆಫೆ ಕೂರ್ಗ್ ಎಂಬ ಹೆಸರಿನ ಹೋಟೇಲ್ ನಡೆಸುತ್ತಿರರುವ ಎನ್.ಕೆ.ಕಾವೇರಪ್ಪ ಎಂಬುವವರಿಗೆ ಚಾಲ್ತಿ ಖಾತೆ ಸಂಖ್ಯೆ 50247 ಅನ್ನು ದಿಃ 01.12.2009 ರಂದು ತೆರೆಯಲು ಸಹಕರಿಸಿರುತ್ತಾರೆ. ಅಲ್ಲದೇ ದಿಃ 04.01.2010 ರಂದು ಉಳಿತಾಯ ಹಾತೆಯನ್ನು ಸದರಿ ಎನ್.ಕೆ.ಕಾವೇರಪ್ಪ ಬಿನ್ ಎನ್.ಬಿ.ಕುಶಾಲಪ್ಪ ರವರಿಗೆ ತಾವೇ ಪರಿಚಯಿಸುವವರಾಗಿ ತೆರೆದಿರುತ್ತಾರೆ. ಅವಶ್ಯಕ ದಾಖಲೆಗಳನ್ನು ಪಡೆದಿರುವುದಿಲ್ಲ ಮತ್ತು ಕೆ.ವೈ.ಸಿ ನಿಯಮಗಳನ್ನು ಪಾಲಿಸಿರುವುದಿಲ್ಲ.

ದಿಃ 23.02.2010 ರಂದು ಕೆ.ಬಿ.ಎಲ್. ಕಾರ್ ಲೋನ್ ಸ್ಕೀಂ ನಲ್ಲಿ ಮಾರುತಿ ಸುಜುಕಿ ಸ್ವಿಫ್ಟ್ ಕಾರ್ ಬೆಲೆ ರೂ. 8,02,410/- ಯನ್ನು ಖರೀದಿಸಲು ರೂ. 6,00,000/- ಗಳ ಕಂತು ಸಾಲವನ್ನು ನೀಡಿರುತ್ತಾರೆ. ಮತ್ತು ಸಾಲದ ಹಣವನ್ನು ಮೇಲೆ ತಿಳಿಸಿದ ಚಾಲ್ತಿ ಖಾತೆ ಸಂಖ್ಯೆ 50247 ಕ್ಕೆ ಜಮಾ ಮಾಡಿರುತ್ತಾರೆ ಹಾಗೂ ಅದೇ ದಿನದಂದು ಪ್ರಥಮ್ ಮೋಟಾರ್ ಬೆಂಗಳೂರು ರವರಿಗೆ ಸಂದಾವಾಗುವಂತೆ ರೂ. 6,12,079/- ಗಳ ಡಿ.ಡಿ ಸಂಖ್ಯೆ 448521 ಅನ್ನು ಬೆಂಗಳೂರಿನ ನಮ್ಮ ಬ್ಯಾಂಕಿನ ಸರ್ವೀಸ್ ಶಾಖೆಯಲ್ಲಿ ಪಡೆಯುವಂತೆ ನೀಡಿರುತ್ತಾರೆ. ಹಾಗೂ ಡಿ.ಡಿ ಮತ್ತು ಕವರಿಂಗ್ ಲೆಟರ್ ನಂ ಎಫ್1091 ರೊಡನೆ ಕಾರು ಮಾರಾಟ ಮಾಡುವವರಿಗೆ ಸಾಲಗಾರರ ಮೂಲಕ ಕಳುಹಿಸಿರುತ್ತಾರೆ. ಆದರೆ, ಇನ್ವಾಯ್ಸ್, ಸ್ಟ್ಯಾಂಪ್ ಹಚ್ಚಿದ ರಶೀದಿ, ಡೂಪ್ಲಿಕೇಟ್ ಕೀ, ಇನ್ಸೂರೆನ್ಸ್ ಪಾಲಿಸಿಗಳನ್ನು ಪಡೆದಿರುವುದಿಲ್ಲ. ಕಾರನ್ನು ಬ್ಯಾಂಕಿಗೆ ಅಡಮಾನ ಮಾಡಿದ ಬಗ್ಗೆ ಆರ್.ಸಿ ಬುಕ್ ಪುಸ್ತಕದಲ್ಲಿ ನಮೂದಿಸಿರುವುದಿಲ್ಲ ಹಾಗೂ ಆ ಬಗ್ಗೆ ದೃಢೀಕರಿಸಿಕೊಂಡಿರುವುದಿಲ್ಲ ಮತ್ತು ಎನ್.ಬಿ.ಎಸ್.ಭಟ್ ರವರು ವಾಹನಗಳನ್ನು ಪರಿಶೀಲಿಸಿರುವುದಿಲ್ಲ. ಬ್ಯಾಂಕಿನ ತನಿಖಾಧಿಕಾರಿಗಳು ಈ ಬಗ್ಗೆ ಸಾಲಗಾರರ ಬಳಿ ವಿಚಾರಿಸುವಂತೆ ತಿಳಿಸಿದ್ದು, ನಾನು ಸದರೀ ಎನ್.ಕೆ.ಕಾವೇರಪ್ಪ ರವರನ್ನು ಈ ಬಗ್ಗೆ ವಿಚಾರಿಸಿದಾಗ ತಾವು ವ್ಯಾಪಾರಕ್ಕಾಗಿ ಸಾಲ ಪಡೆದಿದ್ದು, ಕಾರು ಕೊಳ್ಳಲು ಸಾಲ ಪಡೆದಿಲ್ಲವೆಂದು ಹಾಗೂ ತಾವು ಈಗಾಗಲೇ ಸದರೀ ವಾಹನವನ್ನು ಮಾರಾಟ ಮಾಡಿರುವುದಾಗಿಯೂ ತಿಳಿಸಿರುತ್ತಾರೆ. ಸದರೀ ಸಾಲವನ್ನು ಈಗಾಗಲೇ ಸಬ್ ಸ್ಟಾಂಡರ್ಡ್ ಎಂದು ವರ್ಗಾಯಿಸಲಾಗಿದೆ.

ಸದರೀ ಸಾಲಗಾರರಾದ ಶ್ರೀ ಎನ್.ಕೆ.ಕಾವೇರಪ್ಪ ನವರಿಗೆ ಸಾಲದ ಖಾತೆ ಸಂಖ್ಯೆ ಪಿ.ಎಸ್.ಡಿ.ಪಿ.ಎನ್ 11163 ರಲ್ಲಿ ರೂ. 1,50,000/- ಗಳನ್ನು ಸಾಲವಾಗಿ ನೀಡಿದ್ದು, ಸದರೀ ಹಣವನ್ನು ಸಹ ಚಾಲ್ತಿ ಖಾತೆ ಸಂಖ್ಯೆ50247 ಕ್ಕೆ ಜಮಾ ಮಾಡಿದ್ದು, ಆ ಹಣವನ್ನು ಸಹ ಕೆಫೆ ಕೂರ್ಗ್ ಹೆಸರಿನಲ್ಲಿ ದಿಃ 21.05.2010 ರಲ್ಲಿ ನೀಡಿದ್ದು, ಸದರಿಯವರಿಂದ ಸಹ ಸಾಲ ವಸೂಲಾತಿಯ ನಿಗಧಿಯಂತೆ ಆಗಿರುವುದಿಲ್ಲ. ಆ ಪ್ರಕರಣದಲ್ಲಿಯು ಸಹ ಎನ್.ಬಿ.ಎಸ್.ಭಟ್ ರವರು ಅಧಿಕಾರ ದುರುಪಯೋಗ ಹಾಗೂ ನಂಬಿಕೆ ದ್ರೋಹವೆಸಗಿರುತ್ತಾರೆ.

ಶ್ರೀ ಡಿ.ವೈ.ಉಪ್ಪಾರ್ ಎನ್ನುವವರು ನಮ್ಮ ಬ್ಯಾಂಕಿನ ಗ್ರಾಹಕರಾಗಿದ್ದು, ನಮ್ಮ ಬ್ಯಾಂಕಿನಲ್ಲಿ ಉಳಿತಾಯ ಖಾತೆ ಸಂಖ್ಯೆ762541 ಅನ್ನು ಹೊಂದಿರುತ್ತಾರೆ. ಅವರು ದಿಃ 07.06.2012 ರಂದು ನಮ್ಮ ಬ್ಯಾಂಕಿಗೆ ಲಿಖಿತ ದೂರೊಂದನ್ನು ನೀಡಿದ್ದು, ಆ ದೂರಿನನ್ವಯ ಅವರ ಖಾತೆಯಿಂದ ಅವರ ಒಪ್ಪಿಗೆ ಇಲ್ಲದೇ ಅಥವಾ ಅನುಮತಿ ಇಲ್ಲದೇ ದಿಃ 12.08.2010 ರಂದು ಶ್ರೀ ಎನ್.ಬಿ.ಎಸ್.ಭಟ್ ರವರು ರೂ. 25,00,000/- ಅನ್ನು ತೆಗೆದಿದ್ದು, ಈ ಬಗ್ಗೆ ಅನೇಕ ಬಾರಿ ಮೌಖಿಕವಾಗಿ ಕೋರಿಕೊಂಡರೂ ಸಹ ಹಣವನ್ನು ತುಂಬಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಮೇಲ್ಕಂಡ ಖಾತೆ ನಂ. 762541 ಅನ್ನು ದಿಃ 23.03.2009 ರಂದು ತೆರೆದಿದ್ದು, ಅದು ಜಂಟಿ ಖಾತೆಯಾಗಿದ್ದು, ಸದರೀ ಖಾತೆಯು ಡಿ.ವೈ.ಉಪ್ಪಾರ್ ನಂ. 7 ವಿಜಯನಗರ ಕಾಲೋನಿ, ಶೋಲಾಪುರ ರಸ್ತೆ, ಬಿಜಾಪುರ, ಜಟ್ಟಪ್ಪ ಬಿನ್ ದೇವೇಂದ್ರಪ್ಪ ಕೆ.ಹೆಚ್.ಬಿ ಕಾಲೋನಿ, ವಿಜಯ ಕಾಲೇಜು ಎದುರು, ಬಿಜಾಪುರ, ಸಚ್ಚಿನ್ ಕುಮಾರ್ ಬಿನ್ ರಾಮಚಂದ್ರ ಕಂಬಾರ್, ಕೆ.ಹೆಚ್.ಬಿ ಕಾಲೋನಿ, ವಿಜಯ ಕಾಲೇಜು ಎದುರು, ಬಿಜಾಪುರ ಹಾಗೂ ಕುಮಾರಗೌಡ ಬಿನ್ ಗೊಲಾಲಪ್ಪ ಗೌಡ, ಕೆ.ಹೆಚ್.ಬಿ ಕಾಲೋನಿ ವಿಜಯ ಕಾಲೇಜು ಎದುರು ಬಿಜಾಪುರ, ಹೆಸರಿನಲ್ಲಿ ಜಂಟಿಯಾಗಿ ತೆರೆದಿರುತ್ತದೆ. ಶ್ರೀ ಎನ್.ಬಿ.ಎಸ್.ಭಟ್ ರವರೇ ಖಾತೆ ತೆರೆಯಲು ಪರಿಚಯಿಸಿರುತ್ತಾರೆ. ಡಿ.ವೈ.ಉಪ್ಪಾರ್ ರವರು ನಮ್ಮ ಬ್ಯಾಂಕಿನ ಬಿಜಾಪುರ ಶಾಖೆಯ ಗ್ರಾಹಕರಾಗಿದ್ದು, ಅನೇಕ ಸಾಲ ಸೌಲಭ್ಯಗಳನ್ನು ಹೊಂದಿರುತ್ತಾರೆ. ಮತ್ತು ಅತಿ ಹೆಚ್ಚು ಮೊತ್ತದ ವ್ಯವಹಾರಗಳನ್ನು ಉಳಿತಾಯ ಖಾತೆಯಲ್ಲಿ ಮಾಡಿರುತ್ತಾರೆ. ಖಾತೆಗೆ ತುಂಬಿದ ಮತ್ತು ತೆಗೆದ

ಹಣವೆಲ್ಲವೂ ಅವರ ಬಿಜಾಪುರ ಶಾಖೆಯ ಓ.ಡಿ ಖಾತೆಯಿಂದ ವರ್ಗಾಯಿಸಿದ ಹಾಗೂ ಚೆಕ್ ಮೂಲಕ ನಡೆದ ವ್ಯವಹಾರಗಳಾಗಿರುತ್ತವೆ.

ದಿಃ 11.08.2010 ರಂದು ನಮ್ಮ ಶಾಖೆಯ ಅವರ ಉಳಿತಾಯ ಖಾತೆ 762541 ಕ್ಕೆ ಇಂಟರ್ ಸಾಲ್ ವ್ಯವಹಾರದ ಮೂಲಕ ಬಿಜಾಪುರ ಶಾಖೆಯ ಓ.ಡಿ ಖಾತೆ ಸಂಖ್ಯೆ 168 ರಿಂದ ರೂ. 25,00,000/- ಬಂದಿರುತ್ತದೆ. ದಿಃ 12.08.2010 ರಂದು ಸದರೀ ಹಣವು ಆರ್.ಟಿ.ಜಿ.ಎಸ್ ಮೂಲಕ ಮಂಡ್ಯದಲ್ಲಿರುವ ಬ್ಯಾಂಕ್ ಆಫ್ ಬರೋಡದಲ್ಲಿರುವ ಮೆ. ಶ್ರದ್ಧಾ ಎಂಟರ್ ಪ್ರೈಸಸ್ ರವರ ಚಾಲ್ತಿ ಖಾತೆಗೆ ಡೆಬಿಟ್ ಸ್ಲಿಪ್ ಮೂಲಕ ರೂ. 25,00,000/- ಸಂದಾಯವಾಗಿರುತ್ತದೆ. ಡೆಬಿಟ್ ಸ್ಲಿಪ್ ಮತ್ತು ಆಟ್.ಟಿ.ಜಿ.ಎಸ್ ಅರ್ಜಿಯ ನಮೂನೆಗಳನ್ನು ಶ್ರೀ ಎನ್.ಬಿ.ಎಸ್.ಭಟ್ ರವರು ತಯಾರಿಸಿದ್ದು, ಅದರಲ್ಲಿ ಖಾತೆದಾರರಾದ ಡಿ.ವೈ.ಉಪ್ಪಾರ್ ರವರ ಸಹಿ ಇರುವುದಿಲ್ಲ. ಮೆ. ಶ್ರದ್ಧಾ ಎಂಟರ್ ಪ್ರೈಸಸ್ ಸಂಸ್ಥೆಯು ಶ್ರೀ ಎನ್.ಬಿ.ಎಸ್.ಭಟ್ ರವರ ಪತ್ನಿ ಶ್ರೀಮತಿ ಅನುರಾಧ ರವರ ಒಡೆತನಕ್ಕೆ ಸೇರಿದ್ದು, ಸದರಿಯವರು ಹಿಂದೂಸ್ಥಾನ್ ಯುನಿ ಲೀವರ್ ಲಿ., ಕಂಪನಿಯ ಏಜೆನ್ಸಿ ಹೊಂದಿದ್ದಾರೆಂದು ತಿಳಿದ್ದಾರೆಂದು ತಿಳಿದುಬಂದಿದೆ. ಹೀಗೆ ಸಾರ್ವಜನಿಕರು ಬ್ಯಾಂಕಿನಲ್ಲಿಟ್ಟ ಹಣವನ್ನು ಶ್ರೀ ಎನ್.ಬಿ.ಎಸ್.ಭಟ್ ರವರು ದುರುಪಯೋಗಪಡಿಸಿಕೊಂಡು ತಮ್ಮ ಪತ್ನಿಯ ಖಾತೆಗೆ ವರ್ಗಾಯಿಸಿಕೊಂಡಿರುತ್ತಾರೆ.

ಸದರಿ ದೂರಿನಲ್ಲಿ ನನ್ನ ಸಹಿ ಇದೆ. ಸದರಿ ದೂರನ್ನು ನಿ.ಪಿ. 01 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 01(ಎ) ಎಂದು ಗುರುತಿಸಲಾಯಿತು.

ದಿಃ 11.07.2012 ರಂದು ನಾನು ಸಲ್ಲಿಸಿದ ದೂರಿನ ಆಧಾರದ ಮೇಲೆ ಪೋಲಿಸರು ಹುಣಸೂರು ಪಟ್ಟಣದ ಕರ್ನಾಟಕ ಬ್ಯಾಂಕಿನ ಶಾಖೆಯಲ್ಲಿ ಸ್ಥಳಮಹಜರ್ ಗೆ ಪೋಲಿಸರು ಬಂದಿದ್ದು, ಸದರಿ ಸ್ಥಳವನ್ನು ನಾನು ತೋರಿಸಿದಂತೆ ಚಾಸಾ 07 ರ ಸಮಕ್ಷಮದಲ್ಲಿ ಬೆಳಿಗ್ಗೆ 11 ಗಂಟೆಯಿಂದ 12 ಗಂಟೆಯ ಸಮಯದಲ್ಲಿ ಪಂಚನಾಮೆಯನ್ನು ಮಾಡಿಕೊಂಡಿರುತ್ತಾರೆ. ಸದರಿ ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಸದರಿ ಪಂಚನಾಮೆಯನ್ನು ನಿ.ಪಿ. 02 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ

ಸಹಿಯನ್ನು ನಿ.ಪಿ. 02(ಎ) ಎಂದು ಗುರುತಿಸಲಾಯಿತು.

ದಿಃ 02.10.2012 ರಂದು ತನಿಖಾಧಿಕಾರಿಯು ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳು ಪಿ.ಎಫ್. ಸಂಖ್ಯೆ 155/2012 ದಿಃ 02.10.2012 ರಲ್ಲಿ ನಮೂದಿಸಿದಂತೆ ಒಟ್ಟು 1 ರಿಂದ 84 ದಾಖಲೆಗಳನ್ನು ಪೋಲಿಸ್ ಠಾಣೆಯಲ್ಲಿ ಹಾಜರುಪಡಿಸುವಂತೆ ಕೋರಿಕೊಂಡಿದ್ದರಿಂದ ಅವುಗಳನ್ನು ನಾನು ಹಾಜರುಪಡಿಸಿದ್ದು, ಸದರಿ ದಾಖಲೆಗಳನ್ನು ಚಾಸಾ 9 ಮತ್ತು 10 ರ ಸಮಕ್ಷಮದಲ್ಲಿ ಬೆಳಿಗ್ಗೆ 09 ಗಂಟೆಯಿಂದ ರಾತ್ರಿ 08 ಗಂಟೆಯ ವರೆಗೆ ಅಮಾನತು ಪಂಚನಾಮೆಯನ್ನು ಮಾಡಿಕೊಂಡು ಅಮನಾತು ಮಾಡಿಕೊಂಡಿರುತ್ತಾರೆ. ಸದರಿ ಅಮಾನತು ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಸದರಿ ಪಂಚನಾಮೆಯನ್ನು ನಿ.ಪಿ. 03 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 03(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗಳನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ.

ಮಾನ್ಯ ಎಪಿಪಿ ರವರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಹುಣಸೂರು.